**ಕರ್ನಾಟಕ ಸರ್ಕಾರ**

**ಸಂಖ್ಯೆ:ಸಿಆಸುಇ 26 ಆರ್‌ಟಿಐ 2017**

**ಕರ್ನಾಟಕ ಸರ್ಕಾರದ ಸಚಿವಾಲಯ,**
**ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಜನಸ್ಪಂದನ)**
**3ನೇ ಮಹಡಿ, ಪೋಡಿಯಂ ಬ್ಲಾಕ್,**
**ವಿಶ್ವೇಶ್ವರಯ್ಯ ಮುಖ್ಯ ಗೋಪುರ,**
**ಬೆಂಗಳೂರು, ದಿನಾಂಕ: 02.03.2017.**

**ಸುತ್ತೋಲೆ**

ವಿಷಯ: ಮಾಹಿತಿ ಹಕ್ಕು ಅಧಿನಿಯಮ, 2005ರ ಕಲಂ 19(1)ರಡಿ ಸಲ್ಲಿಸಿದ ಮೊದಲ ಮೇಲ್ಮನವಿಗಳ ವಿಚಾರಣೆಯಲ್ಲಿ ಆದೇಶ ಹೊರಡಿಸುವ ಬಗ್ಗೆ.

ಉಲ್ಲೇಖ:
1. ಸುತ್ತೋಲೆ ಸಂ: ಸಿಆಸುಇ 116 ಆರ್‌ಟಿಐ 2009,ದಿ: 07.07.2010
2. ಸುತ್ತೋಲೆ ಸಂ: ಸಿಆಸುಇ 71 ಆರ್‌ಟಿಐ 2012, ದಿ: 29.06.2012
3. ಸುತ್ತೋಲೆ ಸಂ: ಸಿಆಸುಇ 92 ಆರ್‌ಟಿಐ 2012, ದಿ: 25.08.2012
4. ಸುತ್ತೋಲೆ ಸಂ: ಸಿಆಸುಇ 115 ಆರ್‌ಟಿಐ 2015, ದಿ: 13.08.2015
5. ಸುತ್ತೋಲೆ ಸಂ: ಸಿಆಸುಇ 149 ಆರ್‌ಟಿಐ 2016, ದಿ: 06.08.2016
6. ಸುತ್ತೋಲೆ ಸಂ: ಸಿಆಸುಇ 124 ಆರ್‌ಟಿಐ 2016, ದಿ: 28.09.2016

----0----

ಉಲ್ಲೇಖಿತ ಸುತ್ತೋಲೆಗಳತ್ತ ಗಮನ ಸೆಳೆಯಲಾಗಿದೆ. ಮಾಹಿತಿ ಹಕ್ಕು ಅಧಿನಿಯಮ, 2005ರ ಸಮಗ್ರ ಅನುಷ್ಠನಕ್ಕಾಗಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಉನ್ನತ ಮಟ್ಟದ ಸಮಿತಿಯ 8ನೇ ಸಭೆಯ ನಡವಳಿಯ ಕಂಡಿಕೆ 2ರಲ್ಲಿ ಪ್ರಥಮ ಮೇಲ್ಮನವಿ ಪ್ರಾಧಿಕಾರಗಳು ಮಾಹಿತಿ ಹಕ್ಕು ಅಧಿನಿಯಮ 19(1)ರಡಿ ನಿಗದಿಪಡಿಸಿದ ಕಾಲಾವಧಿ 45 ದಿನಗಳ ಒಳಗಾಗಿ ಕಡ್ಡಾಯವಾಗಿ ವಿಚಾರಣೆ ನಡೆಸಿ ಸೂಕ್ತ ಆದೇಶಗಳನ್ನು ತಪ್ಪದೇ ಹೊರಡಿಸುವಂತೆ ಎಲ್ಲಾ ಇಲಾಖೆಗಳಿಗೆ ಸುತ್ತೋಲೆ ಹೊರಡಿಸಲು ನಿರ್ಧರಿಸಲಾಗಿದೆ.

ಮಾಹಿತಿ ಹಕ್ಕು ಅಧಿನಿಯಮ 2005ರಡಿ ಸಾರ್ವಜನಿಕ ಮಾಹಿತಿ ಅಧಿಕಾರಿಗಳು, ಮಾಹಿತಿ ಕೋರಿಕೆ ಅರ್ಜಿಗಳಿಗ ಸಂಬಂಧಿಸಿದಂತೆ, ಅಧಿನಿಯಮದ ಪ್ರಕರಣ 7,8,9,10,11ಗಳಡಿ ಒದಗಿಸಲಾದ ಅವಕಾಶಗಳನ್ವಯ ಕಾರ್ಯನಿರ್ವಹಿಸಬೇಕಾಗುತ್ತದೆ. ಆದಾಗ್ಯೂ ಕೆಲವು ಸಂದರ್ಭಗಳಲ್ಲಿ ಅರ್ಜಿದಾರರಿಗೆ ಸಾರ್ವಜನಿಕ ಮಾಹಿತಿ ಅಧಿಕಾರಿಯಿಂದ ನಿಗದಿತ ಅವಧಿಯಲ್ಲಿ ಮಾಹಿತಿ ದೊರಕದೇ ಇದ್ದ ಪಕ್ಷದಲ್ಲಿ ಅಥವಾ ಅಪೂರ್ಣ ಮಾಹಿತಿ ಎನಿಸಿದ ಪಕ್ಷದಲ್ಲಿ ಅವರಿಗೆ ಮಾಹಿತಿ ಹಕ್ಕು ಅಧಿನಿಯಮದ ಪ್ರಕರಣ 19(1)ರಡಿ ಮೊದಲ ಮೇಲ್ಮನವಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಮೊದಲ ಮೇಲ್ಮನವಿ ಪ್ರಾಧಿಕಾರವು ಸಂಬಂಧಿಸಿದ ಸಾರ್ವಜನಿಕ ಪ್ರಾಧಿಕಾರದಿಂದ ನೇಮಕವಾದ, ಸಾರ್ವಜನಿಕ ಮಾಹಿತಿ ಅಧಿಕಾರಿಗಿಂತ ಹಿರಿಯ ಅಧಿಕಾರಿಯಾಗಿದ್ದು, ಮೇಲ್ಮನವಿದಾರರಿಂದ ಸ್ವೀಕರಿಸುವ ಮೊದಲ ಮೇಲ್ಮನವಿಗಳನ್ನು ನಿಗದಿತ ಕಾಲಾವಧಿಯೊಳಗೆ ಇತ್ಯರ್ಥಗೊಳಿಸುವಾಗ ಕೆಳಕಂಡ ಕ್ರಮಗಳನ್ನು ಅನುಸರಿಸಬೇಕಾಗುತ್ತದೆ:

ಎ) ಮೊದಲನೇ ಮೇಲ್ಮನವಿಯನ್ನು ನಿಗಧಿಪಡಿಸಲಾದ ಕಾಲಮಿತಿಯೊಳಗಾಗಿ ಇತ್ಯರ್ಥ ಮಾಡಬೇಕಾಗಿರುವುದರಿಂದ, ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ಸಲ್ಲಿಸಲಾದ ಮೇಲ್ಮನವಿಯನ್ನು ವಿಚಾರಣೆ ಮಾಡಲು ವಾರದಲ್ಲಿ ಒಂದು ನಿರ್ದಿಷ್ಟವಾದ ದಿನ ನಿಗಧಿಗೊಳಿಸಬೇಕು. ಕಾಲಮಿತಿಯೊಳಗಾಗಿ ಮೇಲ್ಮನವಿಗಳನ್ನು ಇತ್ಯರ್ಥಗೊಳಿಸಬೇಕಾಗಿರುವುದರಿಂದ, ಯಾವುದೇ ಕಾರಣಕ್ಕೂ ವಿಚಾರಣೆಯನ್ನು ದೀರ್ಘಾವದಿಗೆ ಮುಂದೂಡಬಾರದು.

ಬಿ) ಮೇಲ್ಮನವಿ ಪ್ರಕರಣಗಳಲ್ಲಿ ನೋಟಿಸ್ ನೀಡಿ, ವಿಚಾರಣೆ ಮಾಡುವುದಲ್ಲದೇ, ವಿಚಾರಣೆಯಲ್ಲಿ ನೀಡಿರುವ ನಿರ್ದೇಶನದಂತೆ ಪ್ರತಿವಾದಿಗಳು ಮಾಹಿತಿ/ದಾಖಲೆಗಳನ್ನು ನೀಡಿದ್ದಾರೆಂದು ಖಚಿತಪಡಿಸಿಕೊಳ್ಳಲು, ಪ್ರತಿವಾದಿಯಿಂದ ಮೇಲ್ಮನವಿದಾರರಿಗೆ ಒದಗಿಸಲಾದ ಮಾಹಿತಿಯ ಪ್ರತಿ ಹಾಗೂ ಅವರಿಂದ ಪಡೆದಿರುವ ಸ್ವೀಕೃತಿ/ಅಂಚೆ ಕಚೇರಿಯ ರಸೀದಿಯ ಜೆರಾಕ್ಸ್ ಪ್ರತಿಯನ್ನು, ಮೇಲ್ಮನವಿ ಪ್ರಾಧಿಕಾರಿ ಪಡೆದುಕೊಳ್ಳಬೇಕು. ತದನಂತರ ಕೊಟ್ಟಿರುವ ಮಾಹಿತಿಯ ಬಗ್ಗೆ ಅರ್ಜಿದಾರರ ಹೇಳಿಕೆಯೇನಾದರೂ ಇದ್ದಲ್ಲಿ ಅದನ್ನು ಸಲ್ಲಿಸಲು ವಿಚಾರಣೆಯನ್ನು ಮುಂದೂಡಿ, ಮುಂದೂಡಿದ ದಿನಾಂಕದಂದು ಅರ್ಜಿದಾರರು ಹಾಜರಾಗಿ, ಹೇಳಿಕೆ ನೀಡಿದಲ್ಲಿ ಅದನ್ನು ಪರಿಶೀಲಿಸಿ ಸಂದರ್ಭಾನುಸಾರ ಪ್ರತಿವಾದಿಗಳಿಗೆ ನಿರ್ದೇಶನವನ್ನು ನೀಡತಕ್ಕದ್ದು ಅಥವಾ ಮೇಲ್ಮನವಿದಾರರು ಮಾಹಿತಿಯ ಬಗ್ಗೆ ಸಲ್ಲಿಸಿರುವ ಆಕ್ಷೇಪಣೆಗಳನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲದಿದ್ದಲ್ಲಿ, ಆದೇಶದಲ್ಲಿ ಕಾರಣಗಳನ್ನು ದಾಖಲಿಸಿ, ಪ್ರಕರಣವನ್ನು ಮುಕ್ತಾಯಗೊಳಿಸಬಹುದು.

ಮೇಲಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ತಮ್ಮ ಆಡಳಿತಾಧೀನದ ಎಲ್ಲಾ ಮೇಲ್ಮನವಿ ಪ್ರಾಧಿಕಾರಗಳಿಗೆ ಸೂಚಿಸುವಂತೆ ಕೋರಿದೆ.

(ಪರಮೇಶ್ ಪಾಂಡೆ),
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಜನಸ್ಪಂದನ)

**ಇವರಿಗೆ,**
ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/
ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು

ಪ್ರತಿ ಮಾಹಿತಿಗಾಗಿ:

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ವಿಧಾನ ಸೌಧ, ಬೆಂಗಳೂರು.
2) ಕಾರ್ಯದಶಿಗಳು ,ಕರ್ನಾಟಕ ಮಾಹಿತಿ ಆಯೋಗ, ಬಹುಮಹಡಿ ಕಟ್ಟಡ, ಬೆಂಗಳೂರು.